ಸಿ.ಸಿ .ನಂ. 187/2023 ಪಿಡಬ್ಲೂಃ 1

ದಿನಾಂಕಃ 05-02-2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.

**ಪಾಟೀ ಸವಾಲುಃ ಆರೋಪಿಯ ಪರವಾಗಿಃ ಕುಮಾರಿ ಪಿ ಹೆಚ್ ಕೆ ವಕೀಲರಿಂದಃ**

3. ನಾನು ಫಿರ್ಯಾದು ಬ್ಯಾಂಕಿನಲ್ಲಿ ಅಸಿಸ್ಟೆಂಟ್ ಮ್ಯಾನೇಜರ್ ಆಗಿ ಕಳೆದ 15 ವರ್ಷಗಳಿಂದ ಕಾರ್ಯ ನಿರ್ವಹಿಸುತ್ತಿದ್ದೇನೆ . ಯಾವ ಲೋನಿಗೆ ಯಾವ ಕೋಟೆಶನ್ ಪಡೆಯುತ್ತಾರೆ ಮಾಹಿತಿ ಇದೆ. ಈ ಪ್ರಕರಣದಲ್ಲಿ ಸಾಲಗಾರ ನಮ್ಮ ಬ್ಯಾಂಕಿನಲ್ಲಿ ರೂ . 5,04,000/- ಸಾಲ ಪಡೆದುಕೊಂಡು ಅವರ ಕರ್ನಾಟಕ ಬ್ಯಾಂಕನಲ್ಲಿರುವ ಸಾಲವನ್ನು ತೀರಿಸಿರುತ್ತಾರೆ . ಕರ್ನಾಟಕ ಬ್ಯಾಂಕಿನಲ್ಲಿರುವ ವಾಹನ ಸಾಲ ಡ್ಯೂ ಇತ್ತು, ಗಾಡಿ ವ್ಯಾಲ್ಯುವೇಶನ್ ಜಾಸ್ತಿ ಇರುವುದರಿಂದ ನಮ್ಮಲ್ಲಿ ಲೋನ್ ಮಾಡಿ ಅದನ್ನು ಕ್ಲೋಜ್ ಮಾಡಿದ್ದಾರೆ . ಈ ಉದ್ದೇಶಕ್ಕಾಗಿ ಸಾಲವನ್ನು ಪಡೆದಿದ್ದಾರೆ ಎಂದು ಫಿರ್ಯಾದಿನಲ್ಲಾಗಲೀ , ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಾಗಲೀ,ನೋಟಿಸನಲ್ಲಾಗಲೀ ಹೇಳಿಲ್ಲ ಎಂದರೆ ಸರಿ . ವಾಹನ ಸಂಖ್ಯೆ ಕೆಎ 47/5374 ಇಚರ ವೆಹಿಕಲ್ ಆಗಲೇ ಆರೋಪಿ ಬಳಿ ಇತ್ತು . ಕರ್ನಾಟಕ ಬ್ಯಾಂಕನಲ್ಲಿ ಡ್ಯೂ ಇತ್ತು , ಲೋನ್ ಮಾಡಿ ಆ ಡ್ಯೂ ವನ್ನು ಕ್ಲಿಯರ್ ಮಾಡಿಸಿದ್ದಾರೆ .

4. ಸಾಮಾನ್ಯವಾಗಿ ಸಾಲದ ಅರ್ಜಿಯನ್ನು ಪ್ರಧಾನ ಕಚೇರಿಗೆ ಕಳುಹಿಸಿದ ನಂತರ ಅದನ್ನು ಪರಿಶೀಲನೆ ಮಾಡಿ ಸಾಲ ಮಂಜೂರು ಮಾಡುತ್ತಾರೆ ಎಂದರೆ ಸರಿ . ಒಂದು ಬ್ಯಾಂಕಿನಲ್ಲಿ ಡ್ಯೂ ಇದ್ದಾಗ ಅಂತಹ ಸಾಲವನ್ನು ಮಂಜೂರು ಮಾಡುವುದಿಲ್ಲ ಎಂದರೆ ಸಾಕ್ಷಿ ಅಲ್ಲಿ ಡ್ಯೂ ಇರುವುದಕ್ಕಿಂತ ಗಾಡಿಯ ವ್ಯಾಲ್ಯುವೇಶನ್ ಜಾಸ್ತಿ ಇತ್ತು ಕಾರಣ ಲೋನ್ ಮಂಜೂರು ಮಾಡಿದ್ದಾರೆ . ಕರ್ನಾಟಕ ಬ್ಯಾಂಕಿನ ಕ್ಲೋಜಿಂಗ್ ಬ್ಯಾಲೆನ್ಸ ಲೇಟರನ್ನು ಪಡೆದುಕೊಂಡಿರುತ್ತೇವೆ . ಆ ದಾಖಲಾತಿಯನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿಲ್ಲ ಎಂದರೆ ಸರಿ . ಸಾಲ ನೀಡುವ ಸಮಯದಲ್ಲಿ ವಾಹನವನ್ನು ಖುದ್ದಾಗಿ ಪರಿಶೀಲನೆ ಮಾಡಿರುತ್ತೇವೆ . ಸದರಿ ವಾಹನ ಸಾಲಗಾರರಿಗೆ ಸಂಬಂಧಪಟ್ಟಿದೆ ಎಂದು ದಾಖಲಾತಿಯನ್ನು ಪಡೆದುಕೊಂಡಿದ್ದೇವೆ . ಸಾಲಗಾರರಿಂದ

ಪಿಡಬ್ಲ್ಯೂಃ 1

ಆಧಾರ ಕಾರ್ಡ ಪ್ರತಿ , ಪಾನ ಕಾರ್ಡನ ಪ್ರತಿ ಹಾಗೂ ಪಾಸ್ ಬುಕ್ ನ ಪ್ರತಿ ಪಡೆದುಕೊಂಡಿರುತ್ತೇವೆ . ಈ ಸಾಲಕ್ಕೆ ಸಂಬಂಧಪಟ್ಟಂತೆ ದಿಃ 07-02-2019 ರಂದು ಲೋನ್ ಅಮೌಂಟ್ ಸೆಂಕ್ಷನ್ ಆಗಿದೆ . ಅದಕ್ಕೂ ಪೂರ್ವ ಎರಡು ದಿನಗಳ ಮೊದಲು ಆಡಳಿತ ಸಭೆ ನಡೆದಿತ್ತು . ನಿಪಿ-7 ಸಾಲದ ಅರ್ಜಿ ನಮ್ಮದೇ ಬ್ಯಾಂಕಿನ ಫಾರ್ಮೆಟ್ ಆಗಿರುತ್ತದೆ . ಸದರಿ ಅರ್ಜಿಯಲ್ಲಿ ಯಾವ ದಿನಾಂಕದಂದು ಸಾಲಕ್ಕಾಗಿ ಅರ್ಜಿ ಸಲ್ಲಿಸಲಾಗಿದೆ ಬರೆದಿಲ್ಲ ಎಂದರೆ ಸರಿ . ಸಾಮಾನ್ಯವಾಗಿ ಸಾಲದ ಅರ್ಜಿ ಬಂದಗ ಅದನ್ನು ಪರಿಶೀಲಿಸಿ ಮ್ಯಾನೇಜರ್ ಅದಕ್ಕೆ ನೋಟ್ ಹಾಕುತ್ತಾರೆ ಎಂದರೆ ಸಾಕ್ಷಿ ಅದನ್ನು ಹೆಡ್ ಆಫೀಸ್ ಗೆ ಕಳುಹಿಸುತ್ತೇವೆ ಎಂದು ನುಡಿದಿರುತ್ತಾರೆ . ಸಾಲದ ಅರ್ಜಿಯನ್ನು ಪರಿಶೀಲಿಸಿ ಪ್ರಧಾನ ಕಚೇರಿಗೆ ಕಳುಹಿಸುತ್ತೇವೆ . ಸಾಲಗಾರನ ಆದಾಯ ಸ್ಥಿತಿಯ ಬಗ್ಗೆ ನೋಟ್ ಹಾಕುತ್ತೇವೆ . ಸಾಲದ ಅರ್ಜಿಯಲ್ಲಿನಮೂದಿಸಿರುವ ಅಂಶಗಳು ಸುಳ್ಳು ಎಂದು ಕಂಡು ಬಂದರೆ ಅದನ್ನು ತಿರಸ್ಕರಿಸಲಾಗುತ್ತದೆ ಎಂದರೆ ಸರಿ . ಅಂತಹ ಸಾಲದ ಅರ್ಜಿ ನಮ್ಮ ಸಂಸ್ಥೆಯಲ್ಲಿಯೇ ಇರುತ್ತದೆ ಎಂದರೆ ಸರಿಯಲ್ಲ. ಅದನ್ನು ಪಾರ್ಟಿಗೆ ರಿಟರ್ನ ಮಾಡುತ್ತೇವೆ .

(ಈ ಹಂತದಲ್ಲಿ ಆರೋಪಿ ಪರ ವಕೀಲರ ವಿನಂತಿ ಮೇರೆಗೆ ಪಾಟೀ ಸವಾಲನ್ನು ಮುಂದೂಡಲಾಯಿತು.)

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ. ಹೇ. ಕೇ. ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಧಾನ ಪ್ರ.ದ.ನ್ಯಾದಂ., ಕುಮಟಾ.